**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.1128–14**

| | | |
|---|---|---|
| ಹೆಸರು | ಅರುಣ ಕುಮಾರ್ | ಪ್ರಾ.ಸಾ.3 |
| ತಂದೆಯ ಹೆಸರು | ಲೇಟ್ ನಾರಾಯಣಪ್ಪ | ಚಾ.ಸಾ.4 |
| ವಯಸ್ಸು | 28ವರ್ಷ | |
| ಕೆಲಸ | ಸಮಾಜ ಸೇವಕ | ಸಾ.ಪ್ರ.ವ.ಬೋ |
| ಹಾಲಿ ವಾಸ | ದಂಡುಪಾಳ್ಯ | ದಿ:28.09.2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ದಿ:8.08.2014ರ ಅಮನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದೇ. ಅದನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು. ಆ ದಿನ ಪೊಲೀಸರು ಮಹಜರು ಕ್ರಮ ಜರುಗಿಸಿ ಒಂದು ಬೈಕ್ ಅನ್ನು ಪೊ.ಠಾಣೆಯ ಬಳಿ ಅಮಾನತ್ತುಪಡಿಸಿಕೊಂಡು , ಆಗ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೋಟರು ಸೈಕಲ್ ಅನ್ನು ಪೋಟೋಗಳಲ್ಲಿ ನೋಡುತ್ತಿದ್ದು, ಗುರುತಿಸುತ್ತೇನೆ. ಮೋಟರು ಸೈಕಲ್‌ಗಳು ಇರುವ ಪೋಟೋವನ್ನು ನಿಪಿ.4 ಎಂದು ಗುರುತಿಸಲಾಯಿತು. ಸದರಿ ಬೈಕ್ ಅನ್ನು ಆರೋಪಿಗಳು ಚಿನ್ನದ ಸರವನ್ನು ಕಳವು ಮಾಡಲು ಉಪಯೋಗಿಸಲಾಗಿದ್ದು ಎಂದು ತಿಳಿದುಕೊಂಡಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಅಮಾನತ್ತು ಮಹಜರು ಜರುಗಿಸಿದ ದಿನಾಂಕ ಮತ್ತು ಸಮಯ ಹೇಳಲಾಗುವುದಿಲ್ಲ. ಅದೇ ರೀತಿ ಮೋಟರು ಸೈಕಲ್ಲಿನ ಬಣ್ಣ, ಮತ್ತು ಯಾವ ಕಂಪನಿಗೆ ಸೇರಿದ್ದು, ಮತ್ತು ಅದರ ಸಂಖ್ಯೆ ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ನಿಪಿ.4 ರಲ್ಲಿರುವ ಮೋಟರು ಸೈಕಲ್ ಎಲ್ಲರ ಬಳಿ ಇರುತ್ತದೆ ಎಂದರೆ ಸರಿ. ನಾನು ಇದಲ್ಲದೇ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷಿದಾರನಾಗಿದ್ದೇನೆ ಎಂದರೆ ಸರಿಯಲ್ಲ. ಸರ ಕಳವಿನ ವಿಚಾರವಾಗಿ ಮೋಟರು ಸೈಕಲ್ ಅನ್ನು ಅಮಾನತ್ತುಪಡಿಸಿಕೊಂಡಿರುವ ವಿಚಾರ ಪೊಲೀಸರು ಹೇಳಿದ ಮೇರೆಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಹಜರನ್ನು ಎಷ್ಟು ಸಮಯದಿಂದ ಎಷ್ಟು ಸಮಯವರೆಗೆ ಬರೆಯಲಾಗಿತ್ತು ಎಂದು ಹೇಳಲಾಗುವುದಿಲ್ಲ. ಮಹಜರು ಸ್ಥಳದ ಚಕ್ಕುಬಂದಿ ಹೇಳಲಾಗುವುದಿಲ್ಲ. ನನಗೆ ಈ ಘಟನೆ ಬಗ್ಗೆ ಏನು ಗೊತ್ತಿಲ್ಲದಿದ್ದರು , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿರುವ ಮೋಟರು ಸೈಕಲ್ ಇದೇ ಎಂದು ಹೇಳಲು ಯಾವುದೇ ವಿಶೇಷವಾಗಿ ಗುರುತುಗಳು ಇಲ್ಲ ಎಂದರೆ ಸರಿ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**